# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

**ಬೈರಸಂದ್ರ , ವಾರ್ಡ ಸಂಖ್ಯೆ: 169**

**ದಿನಾಂಕ:21.05.2022 ರಂದು ವಾರ್ಡ ಸಂಖ್ಯೆ 169 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

**-: ಸಮಿತಿ ಸಭೆಯ ನಡವಳಿಗಳು :-**

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲೂ ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು |
| 03 | ಕೆಂದಗಣ್ಣ ಸ್ವಾಮಿ | PSI , ತಿಲಕ್‌ನಗರ ಪೋಲಿಸ್ ಠಾಣೆ |
| 04 | ಶ್ರೀ ಕಲ್ಯಾಣ್ ಮೋಹನ್.ಜಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 06 | ಶ್ರೀ ನರೇಂದ್ರ ಬಾಬು | ಅರಣ್ಯ ಇಲಾಖೆ (ದಕ್ಷಿಣ) , ಬಿ.ಬಿ.ಎಂ.ಪಿ |
| 07 | ಶ್ರೀಮತಿ ಮಂಜುಳ .ಕೆ.ಸಿ | ತೋಟಗಾರಿಕೆ ಇಲಾಖೆ, (ದಕ್ಷಿಣ), ಬಿ.ಬಿ.ಎಂ.ಪಿ ಜಯನಗರ |
| 08 | ಶ್ರೀಮತಿ ದೀಪಿಕಾ ಕೆ.ಟಿ | ಸ.ಅ, BWSSB ಜಯನಗರ |
| 09 | ಶ್ರೀಮತಿ ಶ್ರಿಜಾ . ಎಸ್ | ಸ.ಅ, BWSSB ಜಯನಗರ |
| 10 | ಶ್ರೀ ಮಧುಸುದನ್ ಬಿ.ಎನ್ | ಸ.ಅ, BBMP |
| 11 | ಕುಮಾರಿ ಪೊನಂ | ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 12 | ಶ್ರೀ ಮಹಾತೇಶ್ ಗೌಡ. ಎಸ್ ಬಿರಾದರ್ | PC , ತಿಲಕ್‌ನಗರ ಪೋಲಿಸ್ ಠಾಣೆ |
| 13 | ಶ್ರೀ ಕವಿರಾಜ್ . ಕೆ | ವಾರ್ಡ 169 ಮಾರ್ಷಲ್ |
| 14 | ಶ್ರೀ ಅನಿಲ್ ಕುಮಾರ್ | ಸ.ಕಾ.ನಿ.ಅ, ಯೋಜನೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ |
| 15 | ವಾರ್ಡ 169 ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ನಾಗರೀಕರು | |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 11.04.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.
2. LIC ಕಾಲೋನಿಯ 6ನೇ ಅಡ್ಡರಸ್ತೆ ಮತ್ತು 1ನೇ ಮುಖ್ಯರಸ್ತೆಯ 4ನೇ ಅಡ್ಡರಸ್ತೆಯಲ್ಲಿರುವ ಅನೇಕ ಮ್ಯಾನ್‌ಹೋಲ್ (Manhole) ಗಳಲ್ಲಿ ಹೊಳು ತುಂಬಿಕೊಂಡಿದ್ದು, ಮ್ಯಾನ್‌ಹೋಲ್‌ಗಳಲ್ಲಿರುವ ಹೂಳುನ್ನು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BWSSB, ಜಯನಗರ)**

Scanned with CamScanner

3. ವಾರ್ಡ ಸಂಖ್ಯೆ 169 ರಲ್ಲಿನ ಅನೇಕ ಮನೆಗಳ ಛಾವಣಿ (Terrace) ಗಳಿಂದ ಬರುವ ಮಳೆನೀರು ಪೈಪ್ ಅನ್ನು ನೇರವಾಗಿ ಮ್ಯಾನ್‌ಹೋಲ್ (Manhole) ಗಳಿಗೆ ಜೋಡಿಸಿದ್ದು. ಇದರಿಂದ ಮ್ಯಾನ್‌ಹೋಲ್‌ಗಳಲ್ಲಿ ನೀರಿನ ಹರಿವು ಹೆಚ್ಚಾಗಿ ರಸ್ತೆ ಮೇಲೆ ಹುಕ್ಕಿ ಹರಿದು (Excess of flow) ಸಾರ್ವಜನಿಕ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು ಇದರ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಕೋರಿದರು. (ಕ್ರಮ: ಸ.ಕಾ.ನಿ.ಅ, BWSSB, ಜಯನಗರ)

4. ವಾರ್ಡ ಸಂಖ್ಯೆ 169 ರಲ್ಲಿರುವ ಅನೇಕ ಪಾರ್ಕ್‌ನ ನಿರ್ವಹಣೆ ಕಾರ್ಯ ಮತ್ತು ಸ್ವಚ್ಛತೆಯ ಕೊರತೆ ಇದ್ದು ಮತ್ತು ಪಾರ್ಕ್ ನಿರ್ವಹಣೆ ಮಾಡುವವರು ಸರಿಯಾದ ಕ್ರಮದಲ್ಲಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. ಸದರಿ ಪಾರ್ಕ್‌ನ ನಿರ್ವಹಣೆಗಾರಿಗೆ ಯಾವುದೇ ರೀತಿಯ ಸಂಬಳವನ್ನು ಪಡೆಯುತ್ತಿರುವುದಿಲ್ಲ. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು ಹಾಗೂ ವಾರ್ಡ್‌ನ ಪ್ರತಿಯೊಂದು ಪಾರ್ಕನಲ್ಲಿ ಸ್ಥಳಿಯ ನಾಗರೀಕರು ಮತ್ತು ಪಾರ್ಕನ ಸಿಬ್ಬಂದಿರೊಂದಿಗೆ ಸಭೆಯನ್ನು ಅಯೋಜಿಸಿ ಅಲ್ಲಿನ ಕುಂದು ಕೋರತೆಗಳನ್ನು ಪರಿಹರಿಸಲು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು. **(ಕ್ರಮ: ತೋಟಗಾರಿಕೆ ಇಲಾಖೆ (ದಕ್ಷಿಣ), ಜಯನಗರ & ಸ.ಕಾ.ನಿ.ಅ ಯೋಜನೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

5. ವಾರ್ಡ ಸಂಖ್ಯೆ 169 ರಲ್ಲಿರುವ ಅನೇಕ ಪಾರ್ಕ್‌ನಲ್ಲಿ ಸೊಳ್ಳೆಗಳು ತುಂಬಾ ಹೆಚ್ಚಾಗಿದ್ದು , ಪಾರ್ಕ್‌ಗಳಲ್ಲಿನ ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆ ಔಷದಿಯನ್ನು ಸಿಂಪಡಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ)**

6. ಈ ದಿನಮಾನಗಳಲ್ಲಿ ಸುರಿಯುತ್ತಿರುವ ಅಕಾಲಿಕ ಮಳೆಯಿಂದಾಗಿ ರಸ್ತೆಗಳಲ್ಲಿ ಮರಗಳು ಬೀಳುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಇದರ ಬಗ್ಗೆ ಕ್ರಮ ವಹಿಸಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.**(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

7. ವಾರ್ಡ ಸಂಖ್ಯೆ 169 ರಲ್ಲಿನ 30ನೇ ಅಡ್ಡರಸ್ತೆಯಲ್ಲಿರುವ ಮಾರಮ್ಮ ದೇವಸ್ಥಾನದ ಹತ್ತಿರ ರಾತ್ರಿ ವೇಳೆಯಲ್ಲಿ ಅನಾಮದೇಯ ವ್ಯಕ್ತಿಗಳು ಬಂದು ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದು ಕೂಡಲೇ ಇದರ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು. **(ತಿಲಕ್‌ನಗರ ಪೋಲಿಸ್ ಠಾಣೆ )**

8. ವಾರ್ಡ ಸಂಖ್ಯೆ 169 ರಲ್ಲಿನ ಬೈರಸಂದ್ರ ಪಾರ್ಕನ ಪಕ್ಕದಲ್ಲಿರುವ 22ನೇ ಅಡ್ಡರಸ್ತೆಯಲ್ಲಿ BWSSB ಇಲಾಖೆ ವತಿಯಿಂದ ಒಳಚರಂಡಿ ಮಾರ್ಗಕ್ಕಾಗಿ ರಸ್ತೆಯನ್ನು ಕತ್ತರಿಸಿದ್ದು. ಸದರಿ ರಸ್ತೆಯಲ್ಲಿ Wet mix macadam ಹಾಕಿದ್ದು , ಮಳೆಯಿಂದಾಗಿ ಕುಸಿದು ಹೋಗಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BBMP, ಜಯನಗರ)**

9. ವಾರ್ಡ ಸಂಖ್ಯೆ 169 ಯ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಸ್ವಚ್ಛತೆಯ ಕೊರತೆ ಇದ್ದು ಮತ್ತು ಪಾರ್ಕ್ ನಿರ್ವಹಣೆ ಮಾಡುವವರು ಸರಿಯಾದ ಕ್ರಮದಲ್ಲಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. ಇದರಿಂದ ಕ್ರೀಡಾಂಗಣದಲ್ಲಿ ಹಾವು, ಚೇಳು ಮತ್ತು ಇತರೆ ಕ್ರಿಮಿ ಕಿಟಕಗಳು ಹೆಚ್ಚಾಗಿದ್ದು ಭಯದ ವಾತಾವರಣ ಸೃಷ್ಠಿಯಾಗಿದ್ದು ಇದರ ಬಗ್ಗೆ ಸಂಬಂಧ ಪಟ್ಟ ಇಲಾಖೆಯವರು ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ & ಸ.ಕಾ.ನಿ.ಅ ಯೋಜನೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

Scanned with CamScanner

10. ವಾರ್ಡ ಸಂಖ್ಯೆ 169 ಯ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ನಿರ್ಮಾಸಿರುವ ಸಾರ್ವಜನಿಕ ಶೌಚಲಯದಲ್ಲಿ ಸ್ವಚ್ಚತೆಯ ಕೊರತೆ ಮತ್ತು ನೀರಿನ ಪೈಪ್, ಇನ್ನು ಇತರೆ ದುರಸ್ತಿಯ ಕೆಲಸ ಇದ್ದು. ಸದರಿ ಶೌಚಲಯವನ್ನು ನವಿಕರಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ ಯೋಜನೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

11. ವಾರ್ಡ ಸಂಖ್ಯೆ 169 ಯ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಅನಾಮದೇಯ ವ್ಯಕ್ತಿಗಳಿಂದ ಅನೈತಿಕ ಚಟುವಟಿಕೆಗಳು ಮತ್ತು ಮಾದಕ ವಸ್ತು ಸೇವನೆ ನಡೆಯುತ್ತಿದ್ದು ಕೂಡಲೇ ಇದರ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು. **(ಜಯನಗರ ಮತ್ತು ತಿಲಕ್‌ನಗರ ಪೋಲಿಸ್ ಠಾಣೆ )**

12. ವಾರ್ಡ 169 ರ ವ್ಯಾಪ್ತಿಯ ಸುಬ್ರಮಣ್ಯಂ ದೇವಸ್ಥಾನದ ಹತ್ತಿರ Black spot ಅನ್ನು ತೆರೆವುಗೊಳ್ಳಿಸಿ ಹಾಗೂ Black spot ಗಳು ನಿರ್ಮಾಣವಾಗದೆ ಹಾಗೆ ನಿಗವಹಿಸಲು ಹಾಗೂ ಅಗತ್ಯ ಕ್ರಮವಹಿಸುವಂತೆ ಸಭೆಯಲ್ಲಿ ತಿಳಿಸಿದರು. **(ಕ್ರಮ: ಸ.ಕಾ.ನಿ.ಅ, SWM, ಜಯನಗರ)**

13. ವಾರ್ಡ 169 ರ ವ್ಯಾಪ್ತಿಯ ಸುಬ್ರಮಣ್ಯಂ ದೇವಸ್ಥಾನದ ರಸ್ತೆಯು ಸಾರ್ವಜನಿಕ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು. ಇದರ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು. **(ಜಯನಗರ ಸಂಚಾರ ಪೋಲಿಸ್ ಠಾಣೆ )**

14. ವಾರ್ಡ ಸಂಖ್ಯೆ 169 ನಲ್ಲಿರುವ 22ನೇ ಅಡ್ಡರಸ್ತೆ ಮತ್ತು ಕ್ಲಬ್ ರಸ್ತೆಯ ಅನೇಕ ಮ್ಯಾನ್‌ಹೋಲ್ (Manhole) ಗಳಲ್ಲಿ ಹೊಳು ತುಂಬಿಕೊಂಡಿದ್ದು, ಮ್ಯಾನ್‌ಹೋಲ್‌ಗಳಲ್ಲಿರುವ ಹೂಳುನ್ನು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BWSSB, ಜಯನಗರ)**

**ಆದ್ದರಿಂದ ಮೇಲ್ಕಂಡ ದೂರಗಳ ಬಗ್ಗೆ ಸಂಭಂದ ಪಟ್ಟ ಇಲಾಖೆ/ಅಧಿಕಾರಿಗಳು ಮುಂದಿನ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ ಹಾಗೂ ಮುಂದಿನ ಸಭೆಯಲ್ಲಿ ಮೇಲ್ಕಂಡ ದೂರಗಳ ಬಗ್ಗೆ ಅನುಷ್ಠಾನಗೊಂಡಿರುವ ವರದಿಯನ್ನು ಸಭೆಗೆ ಸಲ್ಲಿಸಲು ನೋಡಲ್ ಅಧಿಕಾರಿಗಳು ರವರ ಆದೇಶದಂತೆ ಕೋರಿದೆ.**

**ನಿರ್ಣಯ:** ಈ ವಿಷಯಕ್ಕೆ ಸಮಿತಿಯು ಒಪ್ಪಿಗೆ ತಿಳಿಸಿರುತ್ತಾರೆ. ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್. ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಮಿತಿ ಸಭೆ
ವಾರ್ಡ–169, ಬೈರಸಂದ್ರ

Scanned with CamScanner